## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ದಿನಾಂಕ: 02-02-2000ದ ಪೂರ್ವದಲ್ಲಿ ಜಾರಿಯಲ್ಲಿದ್ದ ಸಿಬ್ಬಂದಿ ಮಾದರಿ (ಸ್ಟಾಫಿಂಗ್ ಪ್ಯಾಟ್ರನ್) ಪ್ರಕಾರ ದಿನಾಂಕ: 02-02-2000ದ ಪೂರ್ವದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನೇಮಕಾತಿಯಾದ ವೃತ್ತಿ ಅಥವಾ ಚಿತ್ರಕಲಾ ಶಿಕ್ಷಕರುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ.

**ಓದಲಾಗಿದೆ :** 1] ದಿನಾಂಕ: 02-02-2000ದ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 1999ರಲ್ಲಿ ಒಳಗೊಂಡ ನಿಯಮಗಳು.

******

**ಪ್ರಸ್ತಾವನೆ:-**

1) ಮೇಲೆ ಓದಲಾದ ನಿಯಮಗಳ ಪ್ರಕಾರ ಅಂದರೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 1999ರ ಅನುಬಂಧ-4ರನ್ವಯ, ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮಾದರಿಯನ್ನು (ಸ್ಟಾಫಿಂಗ್ ಪ್ಯಾಟ್ರನ್) ನಿಗದಿ ಪಡಿಸಲಾಗಿದೆ. ಅದರಲ್ಲಿ ವೃತ್ತಿ ಶಿಕ್ಷಕರ ಮತ್ತು ಚಿತ್ರಕಲಾ ಶಿಕ್ಷಕರ ಹುದ್ದೆಗಳು ಒಳಗೊಂಡಿರುವುದಿಲ್ಲ. ಆದರೆ ದಿನಾಂಕ : 02-02-2000ರಿಂದ ಸದರಿ ನಿಯಮಗಳು ಜಾರಿಗೆ ಬಂದ ಪೂರ್ವದಲ್ಲಿ, ಪ್ರೌಢಶಾಲೆಗಳ ಅನುದಾನ ಸಂಹಿತೆಯ ಪ್ರಕಾರ ಜಾರಿಯಲ್ಲಿದ್ದ ಸಿಬ್ಬಂದಿ ಮಾದರಿಯಲ್ಲಿ ವೃತ್ತಿ ಶಿಕ್ಷಕರ ಮತ್ತು ಚಿತ್ರಕಲಾ ಶಿಕ್ಷಕರ ಹುದ್ದೆಗಳು ಒಳಗೊಂಡಿದ್ದವು. ಅವುಗಳಿಗೆ ಸಂಬಂಧಿಸಿದಂತೆ, ಮೇಲೆ ಉಲ್ಲೇಖಿಸಲಾದ ನಿಯಮಗಳ ಅನುಬಂಧ-04ರಲ್ಲಿನ ಟಿಪ್ಪಣಿ-03ರನ್ವಯ ಈ ಕೆಳಗೆ ಉದ್ಧರಿಸಿದಂತೆ ಆಸ್ಪದ ಕಲ್ಪಿಸಲಾಗಿದೆ :-

***"The craft teacher existing as on the date of commencement of these rules shall continue in position. However, the posts held by the incumbent shall cease to exist consequent to their retirement, resignation, promotion, death or dismissal, removal etc."***

ಆದರೂ, ದಿನಾಂಕ: 02-02-2000ದ ಪೂರ್ವದಲ್ಲಿ ಜಾರಿಯಲ್ಲಿದ್ದ ಸಿಬ್ಬಂದಿ ಮಾದರಿ (ಸ್ಟಾಫಿಂಗ್ ಪ್ಯಾಟ್ರನ್) ಪ್ರಕಾರ ದಿನಾಂಕ: 02-02-2000ದ ಪೂರ್ವದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನೇಮಕಾತಿಯಾದ ವೃತ್ತಿ ಅಥವಾ ಚಿತ್ರಕಲಾ ಶಿಕ್ಷಕರುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 388 ಎಸ್‌ಇಪಿ 2005**

**ಬೆಂಗಳೂರು, ದಿನಾಂಕ : 27ನೇ ಜನವರಿ 2007.**

02] ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ದಿನಾಂಕ: 02-02-2000ದ ಪೂರ್ವದಲ್ಲಿ ಜಾರಿಯಲ್ಲಿದ್ದ ಸಿಬ್ಬಂದಿ ಮಾದರಿ (ಸ್ಟಾಫಿಂಗ್ ಪ್ಯಾಟ್ರನ್) ಪ್ರಕಾರ ದಿನಾಂಕ: 02-02-2000ದ ಪೂರ್ವದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನೇಮಕಾತಿಯಾದ ಒಂದು ಪ್ರೌಢಶಾಲೆಗೆ ಒಬ್ಬರು ವೃತ್ತಿ ಅಥವಾ ಒಬ್ಬರು ಚಿತ್ರ ಕಲಾ ಶಿಕ್ಷಕರುಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸಬಹುದೆಂದು ಸರ್ಕಾರವು ಈ ಮೂಲಕ ಆದೇಶಿಸಿದೆ :-

**ಷರತ್ತುಗಳು**

(1) ಆಯಾಯ ಆಡಳಿತ ಮಂಡಳಿಯು ವೃತ್ತಿ ಶಿಕ್ಷಕರ ಅಥವಾ ಚಿತ್ರಕಲಾ ಶಿಕ್ಷಕರ ಹುದ್ದೆಗೆ ದಿನಾಂಕ : 02-02-2000ದ ಮೊದಲೇ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆದು, ನಿಗದಿತ ಕಾರ್ಯ ವಿಧಾನದ ಪ್ರಕಾರ ನೇಮಕಾತಿ ಮಾಡಿಕೊಂಡಿರಬೇಕು.

(2) ಆಡಳಿತ ಮಂಡಳಿಯು ನೀಡಿದ ನೇಮಕಾತಿ ಆದೇಶದಂತೆ, ಅಭ್ಯರ್ಥಿ ದಿನಾಂಕ : 02-02-2000ದ ಪೂರ್ವದಲ್ಲೇ ಕರ್ತವ್ಯಕ್ಕೆ ಹಾಜರಾಗಿ, ಇದುವರೆವಿಗೂ ಸೇವೆಯನ್ನು ಸತತವಾಗಿ ನಿರ್ವಹಿಸುತ್ತಿರಬೇಕು.

SO SEC-A

(3) ಸಂಬಂಧಿಸಿದ ಅಭ್ಯರ್ಥಿಯು ದಿನಾಂಕ : 02–02–2000ರ ಪೂರ್ವದಲ್ಲಿ ನೇಮಕಾತಿ ಮಾಡಿಕೊಂಡ ದಿನಾಂಕಕ್ಕೆ ಅನ್ವಯವಾಗುವಂತೆ ನಿಗದಿತ ವಯೋಮಿತಿಯೊಳಗೆ ಇದ್ದು, ನಿಗದಿತ ವಿದ್ಯಾರ್ಹತೆ ಹೊಂದಿರತಕ್ಕದ್ದು

(4) ಈ ಸಂಬಂಧ ಉಂಟಾಗುವ ಹೆಚ್ಚುವರಿ ವೆಚ್ಚಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(5) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾಷರತ್ತು ಮತ್ತು ನಿಬಂಧನೆಗಳು), ನಿಯಮಗಳು, 1999 ಇದಕ್ಕೆ ಅಗತ್ಯ ತಿದ್ದುಪಡಿ ತರುವುದನ್ನು ಬಾಕಿ ಇಟ್ಟು ಈ ಆದೇಶವನ್ನು ಹೊರಡಿಸಲಾಗಿದೆ. ಅಗತ್ಯ ತಿದ್ದುಪಡಿಯನ್ನು ನಂತರ ಪ್ರತ್ಯೇಕವಾಗಿ ಮಾಡಲಾಗುವುದು.

(6) ಒಂದು ಪ್ರೌಢಶಾಲೆಯಲ್ಲಿ ಒಬ್ಬ ವಿಶೇಷ ಶಿಕ್ಷಕರು ಅಂದರೆ ವೃತ್ತಿ ಅಥವಾ ಚಿತ್ರಕಲಾ ಶಿಕ್ಷಕರಿಗೆ ಮಾತ್ರ ಅವಕಾಶವಿದ್ದು ಅದರಂತೆ ಅನುಮೋದಿಸಬಹುದು.

3] ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ: 05–01–2007ರ ಟಿಪ್ಪಣಿ ಸಂಖ್ಯೆ: ಆಇ 1175 ವೆಚ್ಚ–8/2006ರ ಪ್ರಕಾರ ನೀಡಿದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

4] ಈ ಆದೇಶದನ್ವಯ ಸದರಿ ವೃತ್ತಿ ಅಥವಾ ಚಿತ್ರಕಲಾ ಶಿಕ್ಷಕರನ್ನು ಭವಿಷ್ಯವರ್ತಿಯಿಂದ ಸಹಾಯಾನುದಾನಕ್ಕೆ ಒಳಪಡಿಸುವ ಅಧಿಕಾರವನ್ನು ಈ ಮೂಲಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯಾಯಾ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಸಿದ್ದಲಿಂಗಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಆದೇಶದ 500 ಪ್ರತಿಗಳನ್ನು ಸರ್ಕಾರಕ್ಕೆ ಒದಗಿಸಲು ಕೋರಿದೆ.

**ಪ್ರತಿಯನ್ನು :**

01) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
02) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
03) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
04) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
05) ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
06) ನಿರ್ದೇಶಕರು, ಅಪರ ಆಯುಕ್ತರು ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
07) ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
08) ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,
09) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–8)/ಯೋಜನಾ ಇಲಾಖೆ/(ಪಿಪಿ–1)
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

SO SEC-A